

ತಪ್ಪಿಸಿಕೊಂಡಿದ್ದ ಪುಟ್ಟ ಮಗುವೊಂದು ಪೋಲಿಸರ ಬಳಿ ಬಂದು ಕೇಳಿತು.

'ಪೋಲಿಸ್ ಅಂಕಲ್, ನನ್ನಂತಹ ಮಗುವನ್ನು ಕಳೆದುಕೊಂಡು ಅಳುತ್ತಿರುವ ಹೆಂಗಸನ್ನೇನಾದರೂ ನೋಡಿದ್ರಾ'?

★★★

ಆದರ್ಶ ವಿದ್ಯಾರ್ಥಿಗಳ ಗುಂಪೊಂದು 'ಟಾಸ್' ಹಾಕುತ್ತಿತ್ತು.

ಮೊದಲನೆಯವ: ಈಗ 'ಹೆಡ್'ಬಿದ್ದರೆ ನಾವೆಲ್ಲಾ ಮಲಗೋಣ.

ಎರಡನೆಯವ: ಟೈಲ್‌ಬಿದ್ದರೆ ಸೆಕೆಂಡ್ ಶೋ ಸಿನಿಮಾ ನೋಡೋಣ.

ಮೂರನೆಯವ: ನೆಲದ ಮೇಲೆ ನೆಟ್ಟಗೆ ನಿಂತರೆ ವಾಕಿಂಗ್ ಹೋಗೋಣ.

ನಾಲ್ಕನೆಯವ: ನಾಣ್ಯ ವಾಪಸ್ಸು ಬರದೆ ಮೇಲೆಯೇ ನಿಂತರೆ ಓದಲು ಪ್ರಾರಂಭಿಸೋಣ!

★★★

ಹೋಟೆಲೊಂದರ ಒಳಹೊಕ್ಕ ರಾಮು ವೇಟರ್‌ನನ್ನು ಕೇಳಿದ.

'ಬಿಸಿ ಬಿಸಿ ಏನಿದೆ?'

'ಎಲ್ಲಾ ಬಿಸಿ ಬಿಸಿಯಾಗೇ ಇದೆ.'

'ಸರಿ. ನಂಗೊಂದು ಲೋಟ ಬಿಸಿ ಮಜ್ಜಿಗೆ ತಾ' ಎಂದು ಆರ್ಡರ್ ಮಾಡಿಯೇಬಿಟ್ಟ.

★★★

ಗುಂಡನ ಮೊದಲ ವರ್ಷದ ಮದುವೆ ವಾರ್ಷಿಕೋತ್ಸವವಿತ್ತು.

**ಹೆಂಡತಿ:** ಖುಷಿಯಿಂದ 'ಬಟರ್ ಚಿಕನ್ ಮಾಡಲೇ' ಎಂದು ಕೇಳಿದಳು.

**ಗುಂಡ:** 'ಒಂದು ವರ್ಷದ ಹಿಂದೆ ನಾವು ಮಾಡಿದ ತಪ್ಪಿಗೆ ಪಾಪ, ಕೋಳಿಗೇಕೆ ಶಿಕ್ಷೆ?' ಎಂದ.

**(ಸಂ) ಶ್ರುತಿ.ಕೆ.ಎಸ್.ತುರುವೇಕೆರೆ**

---



## ಉತ್ಸುಕತೆ!

ಗೋಪಿ ತನ್ನ ವಿವಾಹ ಪ್ರಮಾಣಪತ್ರವನ್ನು ತುಂಬಾ ಗಹನವಾಗಿ ಗಮನಿಸುತ್ತಿದ್ದ. ಪತ್ನಿ ರತ್ನಾ ವೈಯಾರದಿಂದ ಕೇಳಿದಳು. 'ಏನ್ರೀ, ಅಷ್ಟು ಹೊತ್ತಿನಿಂದ ಅದೇನು ನೋಡುತ್ತಿದ್ದೀರಿ ನಮ್ಮ ಮದುವೆ ಸರ್ಟಿಫಿಕೇಟ್‌ನಲ್ಲಿ?'

ಗೋಪಿ: ಎಕ್ಸ್‌ಪೈರಿ ಡೇಟ್ ಯಾವಾಗ ಎಂದು ಹುಡುಕುತ್ತಿದ್ದೇನೆ ಕಣೆ...!

★★★

## ಪರಿತಾಪ

ಗೋಪಿ: ಆ ದಿನಗಳು ಅದೆಷ್ಟು ಸೊಗಸಾಗಿದ್ದವು? ಆಗ 18-20ರ ವಯಸ್ಸಿನ ಸುಂದರ ಯುವತಿಯರು ನನಗೆ ಪ್ರತಿದಿನ ಮುತ್ತನ್ನೀಯುತ್ತಿದ್ದರು...

ರಾಮು: ಈಗ ಅವರೆಲ್ಲಾ ಏನಾದರು?

ಗೋಪಿ: ನನ್ನ ದುರಾದೃಷ್ಟ, ಅವರೆಲ್ಲಾ ಈಗ ಮುದುಕಿಯರಾಗಿದ್ದಾರೆ ಮತ್ತು ಆಗ ನನ್ನ ವಯಸ್ಸು 2-3 ವರ್ಷಗಳಷ್ಟೇ ಆಗಿತ್ತು!

★★★

## ಕಥೆ?

ಸಂತಾ ಲೈಬ್ರೆರಿಯಲ್ಲಿ 3 ಗಂಟೆಗಳಷ್ಟು ಸಮಯ ಒಂದು ಪುಸ್ತಕವನ್ನು ವಾಚಿಸಿದ ಬಳಿಕ, 'ತುಂಬಾ ಬೋರಿಂಗ್ ಪುಸ್ತಕ ಕಥೆಯೇ ಇಲ್ಲ; ಕೇವಲ ಪಾತ್ರಗಳೇ ತುಂಬಿವೆ' ಎಂದು ಸಶಬ್ದವಾಗಿ ಗೊಣಗಿಕೊಂಡ.

ಅದನ್ನು ಕೇಳಿಸಿಕೊಂಡ ಲೈಬ್ರೆರಿಯನ್, 'ಇದು ಟೆಲಿಫೋನ್ ಡೈರೆಕ್ಟರಿ ಪಾಜೀ...' ಎಂದು ಶಾಂತವಾಗಿ ಉತ್ತರಿಸಿ ಸಮಾಧಾನ ಪಡಿಸಿದರು.

★★★

## ಹತ್ತು ತಲೆ!

ಒಮ್ಮೆ ರಾವಣ ಡಿಸ್ಕೋ ಥೆಕ್‌ಗೆ ಹೋದ. ಅಲ್ಲಿ ಪ್ರವೇಶದ್ವಾರದಲ್ಲೇ ಆಘಾತಕ್ಕೊಳಪಟ್ಟು ಆತ ಪ್ರಜ್ಞಾಹೀನನಾಗಿ ಬಿದ್ದು ಬಿಟ್ಟ. ಏಕೆ ಗೊತ್ತೆ?

'ಪ್ರವೇಶ ಶುಲ್ಕ ರೂಪಾಯಿ 2000 ಪರ್ ಹೆಡ್ ಎಂದು ಬಾಗಿಲಲ್ಲಿ ಬರೆಯಲಾಗಿತ್ತು.'

★★★

## ಮುಗ್ಧೆ?!

ಡಾಕ್ಟರ್: ಹೆರಿಗೆಯ ಸಮಯ ಮಗುವಿನ ಅಪ್ಪನನ್ನು ಬಳಿಗೆ ಕರೆಸಿಕೊಳ್ಳಲು ನೀವು ಇಚ್ಛಿಸುವಿರಾ?

ಗರ್ಭಿಣಿ ಯುವತಿ: ಇಲ್ಲ ಡಾಕ್ಟರ್, ಆ ಸಮಯ ನನ್ನ ಪತಿಯೊಬ್ಬರೇ ನನ್ನ ಜೊತೆಗಿರಲು ಇಚ್ಛಿಸುತ್ತಾರೆ...!

**(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ಸಮಾಧಾನ

ಪಿಕ್‌ಪಾಕೆಟ್ ಅನ್ನೇ ಕಸುಬು ಮಾಡಿಕೊಂಡಿದ್ದ ರಂಗ, ಅಪಘಾತವೊಂದರಲ್ಲಿ ತನ್ನೆರಡು ಕೈಗಳನ್ನೂ ಕಳೆದುಕೊಂಡ. ಕೈಗಳಿಲ್ಲದ ಅಳಲನ್ನು ಸ್ನೇಹಿತನಲ್ಲಿ ಹೇಳಿಕೊಳ್ಳುತ್ತಿದ್ದನು:

ರಂಗ: ಕೈಗಳನ್ನು ಕಳೆದುಕೊಂಡ ಮೇಲೆ ನನಗೆ ಬದುಕುವುದೇ ಕಷ್ಟವಾಗಿದೆ.

ಮಿತ್ರ: ಹೋಗ್ಲಿ ಬಿಡು, ಸಧ್ಯ, ಕಾಲಾದ್ರೂ ಉಳಿದಿರುವುದಕ್ಕೆ ಸಮಾಧಾನ ಮಾಡ್ಕೊ.

ರಂಗ: ಹೌದಲ್ವಾ? ಚಪ್ಪಲೀನಾದ್ರೂ ಕದ್ದು ಜೀವನ ಸಾಗಿಸಬಹುದು.

**(ಸಂ) ಕವಿತಾ ಮೇಗೂರು, ಉಡುಪಿ**